ಇ) ಈ ಕೈಗಾರಿಕೆಯನ್ನು ಪ್ರಾರಂಬಿಸಲು ಸಾಧ್ಯವಿಲ್ಲದಿದ್ದಲ್ಲ, ಸ್ಪೈಸ್ ಬೋರ್ಡ್‌ನ ಅಥವಾ ಇನ್ನಾವುದೇ ಇಂತಹ ಸಂಸ್ಥೆಗಳಿಗೆ ಆಹ್ವಾನ ನೀಡುವ ಸಂಬಂಧದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಬಂದಿದೆ.

ಆ) ಹಾವೇರಿ ಜಿಲ್ಲೆಯಲ್ಲಿ ಹೇರಳವಾಗಿ ಬೆಳೆಯುತ್ತಿರುವ ಮುಸುಕಿನ ಜೋಳದಿಂದ ಪೂರಕ ವಸ್ತುಗಳನ್ನು ತಯಾರಿಸುವ ಕೈಗಾರಿಕೆಗಳನ್ನು ಸರ್ಕಾರವೇ ಪ್ರಾರಂಭಿಸುವ ಉದ್ದೇಶವಿರುವುದಿಲ್ಲ. ಆದರೆ, ಇಂತಹ ಉದ್ದಿಮೆಗಳನ್ನು ಖಾಸಗಿ ವಲಯದಲ್ಲಿ ಪ್ರಾರಂಭಿಸಲು ಉದ್ದಿಮೆದಾರರನ್ನು ಹುರಿದುಂಬಿಸಿ ಅಗತ್ಯ ಸೌಕರ್ಯಗಳನ್ನು ಉತ್ತೇಜನ/ರಿಯಾಯಿತಿಗಳನ್ನು ನೀಡುವುದರ ಮೂಲಕ ಪ್ರೋತ್ಸಾಹಿಸಲಾಗುವುದು.

ಇ) ಖಾಸಗಿ ಉದ್ದಿಮೆದಾರರನ್ನು ಗುರುತಿಸಲು ಜಿಲ್ಲಾಡಳಿತದ ಸಹಯೋಗದೊಂದಿಗೆ ಬಂಡವಾಳ ಹೂಡಿಕೆದಾರರ ಸಮಾವೇಶ /ವಿಚಾರ ಸಂಕೀರಣ ನಡೆಸಲು ಈಗಾಗಲೇ ಜಂಟಿ ನಿರ್ದೇಶಕರು ಹಾವೇರಿರವರಿಗೆ ನಿರ್ದೇಶನ ನೀಡಲಾಗಿದೆ.

820 (1293) ಶ್ರೀ ಓಲೇಕಾರ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಸ್ಪೈಸ್ ಬೋರ್ಡ್‌ನಿಂದ ಬ್ಯಾಡಗಿಯಲ್ಲಿ ಪ್ರಾರಂಭಿಸಿರುವ ಓಲಿಯೋರೇಜಿನ್ (ಎಣ್ಣೆ ತೆಗೆಯುವ) ಕೈಗಾರಿಕಾ ಯಾವ ಹಂತದಲ್ಲಿದೆ;

ಆ) ಇದುವರೆಗೆ ಈ ಕೈಗಾರಿಕೆಗೆ ಸರ್ಕಾರ ಖರ್ಚು ಮಾಡಿದ ಹಣವೆಷ್ಟು;

ಇ) ಈ ಕೈಗಾರಿಕೆಯ ಕಾರ್ಯವನ್ನು ಯಾವಾಗ ಪ್ರಾರಂಭ ಮಾಡಲಾಗುವುದು;

ಈ) ಸ್ಥಳೀಯ ನಿರುದ್ಯೋಗಿ ಯುವಕರಿಗೆ ಈ ಕೈಗಾರಿಕೆಯಲ್ಲಿ ಕೆಲಸ ನೀಡಲು ಸರ್ಕಾರ ತೀರ್ಮಾನಿಸಿದೆಯೇ?

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಸ್ಪೈಸ್ ಬೋರ್ಡ್‌ನ ಅಧೀನ ಸಂಸ್ಥೆಯಾದ ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ ಲಿಮಿಟೆಡ್ (ಎಸ್.ಟಿ.ಸಿ.ಎಲ್) ಬ್ಯಾಡಗಿಯಲ್ಲಿ ಹಣ್ಣು ಮೆಣಸಿನಕಾಯಿಯನ್ನು ಸಂಸ್ಕರಿಸಿ ಬೀಜ ತೆಗೆದು, ಕತ್ತರಿಸಿ ಯಂತ್ರದ ಮೂಲಕ ಕೃತಕವಾಗಿ ಒಣಗಿದ ಮೆಣಸಿನಕಾಯಿ ಪಕಳೆಗಳನ್ನು ಉತ್ಪಾದಿಸಲಾಗುತ್ತದೆ. ಈ ಅಂತಿಮ ಉತ್ಪನ್ನವನ್ನು ಒಲಿಯೋರೇಜಿನ್ ತಯಾರಕರಿಗೆ ಸರಬರಾಜು

ಮಾಡಲಾಗುತ್ತದೆ. ಈ ಕಾರ್ಖಾನೆಯ ನಿರ್ಮಾಣ ಕಾರ್ಯ ಪೂರ್ಣವಾಗಿರುತ್ತದೆ.

ಆ) ಈ ಕೈಗಾರಿಕೆಗೆ ರಾಜ್ಯ ಸರ್ಕಾರದಿಂದ ಯಾವ ಹಣ ಬಿಡುಗಡೆಯಾಗಿರುವುದಿಲ್ಲ. ಈ ಯೋಜನೆಯ ಒಟ್ಟು ಮೊತ್ತ ರೂ.363.10 ಲಕ್ಷಗಳಲ್ಲಿ ಕೇಂದ್ರ ಸರ್ಕಾರದ ಅಸೈಡ್ ಯೋಜನೆಯಡಿ ರೂ.120 ಲಕ್ಷ ಬಿಡುಗಡೆಯಾಗಿರುತ್ತದೆ ಹಾಗೂ ಉಳಿದ ಹಣ ರೂ.243.10 ಲಕ್ಷಗಳನ್ನು STCI ಹಾಗೂ ಸ್ಪೈಸ್ ಬೋರ್ಡ್ ಭರಿಸಿರುತ್ತದೆ. ಇಲ್ಲಿಯವರೆಗೆ ಕಾರ್ಖಾನೆಗೆ ರೂ.251.53 ಲಕ್ಷಗಳನ್ನು ಖರ್ಚು ಮಾಡಿದೆ. ಬಾಕಿ ರೂ.111.77 ಲಕ್ಷಗಳನ್ನು ಸೆಪ್ಟೆಂಬರ್ 2007ರ ಒಳಗಾಗಿ ಖರ್ಚು ಮಾಡಲಾಗುವುದು.

ಇ) ಉತ್ಪಾದನೆಯು ಪ್ರಾಯೋಗಿಕ ಹಂತದಲ್ಲಿದೆ ಮತ್ತು ವಾಣಿಜ್ಯ ಉತ್ಪಾದನೆಯನ್ನು ಸೆಪ್ಟೆಂಬರ್ 2007 ರಿಂದ ಪ್ರಾರಂಭಿಸಲಾಗುತ್ತದೆ.

ಈ) ಈ ಕಾರ್ಖಾನೆಯ ಶೇ.90 ರಷ್ಟು ಸ್ವಯಂಚಾಲಿತವಾಗಿದೆ. ಮತ್ತು ಖಾಯಂ ತಾಂತ್ರಿಕ ಪರಿಣಿತವುಳ್ಳ ಉದ್ಯೋಗಿಗಳು ಬೇಕಾಗಿರುತ್ತಾರೆ. ಒಟ್ಟು ತಾಂತ್ರಿಕ ತಜ್ಞರನ್ನೊಳಗೊಂಡ 4 ಜನರಿಗೆ ಉದ್ಯೋಗ ನೀಡಲಾಗಿದೆ ಅದರಲ್ಲಿ 3 ಜನ ಸ್ಥಳೀಯರಾಗಿದ್ದಾರೆ.

822 (1295) ಶ್ರೀ ಓಲೇಕಾರ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಬ್ಯಾಡಗಿಯಲ್ಲಿ ನಿರ್ಮಿಸಲಾಗುತ್ತಿರುವ ಮಿನಿ ವಿಧಾನಸೌಧದ ಕೆಲಸ ಕಳೆಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಕಾಮಗಾರಿಗೆ ಈವರೆಗೆ ಖರ್ಚು ಮಾಡಲಾದ ಹಣವೆಷ್ಟು; ಇನ್ನೂ ಖರ್ಚು ಮಾಡಬೇಕಾಗಿರುವ ಹಣವೆಷ್ಟು;

ಇ) ಈ ಕಾಮಗಾರಿಗೆ ಸಾದಾ ಇಟ್ಟಿಗೆಗಳನ್ನು ಬಳಸಿರುವುದನ್ನು ಹೌಸಿಂಗ್ ಬೋರ್ಡನವರಾಗಲಿ ಇಲಾಖೆಯವರಾಗಲಿ ಏಕೆ ಪರಿಶೀಲನೆ ಮಾಡಿರುವುದಿಲ್ಲ;

ಈ) ಹಾಗಿದ್ದಲ್ಲ, ಈ ಬಗ್ಗೆ ಸರ್ಕಾರದ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ದೂರು ಬಂದಿರುತ್ತದೆ.

ಆ) ಈ ಕಾಮಗಾರಿಗೆ ಈವರೆಗೂ ರೂ.78,63,313 ಗಳನ್ನು ಖರ್ಚು ಮಾಡಲಾಗಿದ್ದು, ಇನ್ನೂ ರೂ.74,16,832 ಖರ್ಚು ಮಾಡಲು ಬಾಕಿ ಇರುತ್ತದೆ.

ಇ) ಈ ಕಾಮಗಾರಿಗೆ ಬಳಸಿರುವ ಇಟ್ಟಿಗೆಗಳ ಗುಣಮಟ್ಟದ ಬಗ್ಗೆ ಪರೀಕ್ಷೆ ಮಾಡಿಸಿ ಇಟ್ಟಿಗೆಗಳ ಗುಣಮಟ್ಟವು ನಿಗದಿತ ಮಿತಿಯೊಳಗಾಗಿ ಇರುವುದಾಗಿ ರಾಣಿಬೆನ್ನೂರಿನ ಎಸ್.ಟಿ.ಜೆ. ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆ, ಮೆ. ಕರ್ನಾಟಕ ಟೆಸ್ಟ್ ಹೌಸ್ ಪ್ರೈ.ಲಿ., ಮೆಟೀರಿಯಲ್ ಟೆಸ್ಟಿಂಗ್ ಲ್ಯಾಬೊರೇಟರಿ,